ಅಸಲು ದಾವಾ ಸಂಖ್ಯೆ - 334/2012
ಪಿಡಬ್ಲ್ಯೂ - 01
ದಿನಾಂಕಃ 21-06-2018
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎನ್ ಎಸ್ ಪಿ ಪ್ರತಿವಾದಿ ಪರ ವಕೀಲರಿಂದ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ನಾನೇ ಹೇಳಿ ಬರಸಿರುತ್ತೇನೆ ಮತ್ತು ಅದರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತವೆ. ದಾವಾ ಆಸ್ತಿ ಎಂದರೆ ಸಾವಿರಾರು ಜನರಿಗೆ ಓಡಾಡುವ ದಾರಿ ಇರುತ್ತದೆ. ಯಾವ ಪುರಸಭೆಯ ಆಸ್ತಿಯ ನಂಬರನಲ್ಲಿ ದಾರಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾರಿ ಇರುವ ಆಸ್ತಿಯ ನಂಬರನ್ನು ನಾನು ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿಯಾದ ದಾರಿಯು ಇರುವ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ನಂಬರನ್ನು ನಾನು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಈ ದಾವೆಯಲ್ಲಿ ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ದಾರಿಯ ಸಲುವಾಗಿ ಪ್ರತಿವಾದಿಯ ಮೇಲೆ ಮಾಡಿರುತ್ತೇನೆ.

ದಾವಾ ಆಸ್ತಿಯಾದ ದಾರಿಯ ಚಕಬಂದಿ ನನಗೆ ಹೇಳಲು ಬರುತ್ತದೆ. ಪೂರ್ವಕ್ಕೆ ಮಸೂತಿಯ ಜಾಗ ಇರುತ್ತದೆ. ಪಶ್ಚಿಮಕ್ಕೆ ಪ್ರತಿವಾದಿಯರ ಇವರ ಮನೆ ಇರುತ್ತದೆ. ದಕ್ಷಿಣಕ್ಕೆ ರಸ್ತೆ ಇರುತ್ತದೆ. ಉತ್ತರಕ್ಕೆ ರಸ್ತೆ ಇರುತ್ತದೆ. ದಾವಾ ಆಸ್ತಿಯ ಚಕಬಂದಿ ಮೇಲೆ ಹೇಳಿದ ಪ್ರಕಾರ ಇರುತ್ತದೆ ಎಂದು ತಿಳಿಸಲು ನಾನು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನನ್ನ ವಾದ ಪತ್ರದಲ್ಲಿ ನಾನು ಮೇಲೆ ಹೇಳಿದ ಚಕಬಂದಿಯನ್ನು ಬರೆಸಿರುತ್ತೇನೆ ನನ್ನ ವಾದ ಪತ್ರದಲ್ಲಿ ನಾನು ದಾವಾ ಆಸ್ತಿಯಾದ ದಾರಿಯ ಚಕಬಂದಿಯನ್ನು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ ದಾವಾ ಆಸ್ತಿಯಾದ ದಾರಿಯ ಅಗಲ ಪೂರ್ವ ಪಶ್ಚಿಮ 33 ಪೂಟ್ ಉತ್ತರ ದಕ್ಷಿಣ ಬಹಳ ಉದ್ದ ಇರುತ್ತದೆ. ಉತ್ತರ ದಕ್ಷಿಣ ದಾರಿಯು ಬಹಳ ಉದ್ದ ಆಗಿರುವ ಕಾರಣ ನನಗೆ ಎಷ್ಟು ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯು ಪರಡಿ ನಂ. 27 ರಿಂದ ಪ್ರಾರಂಭವಾಗಿ ಗದಗ ರಸ್ತೆಗೆ ಹೋಗಿ ಕೂಡುತ್ತದೆ. ದಾವಾ ಆಸ್ತಿಯು ಯಾವ ಯಾವ ಆಸ್ತಿಗಳಲ್ಲಿ ಹಾಯ್ದು ಹೋಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಪುರಸಭೆಯ ದಾಖಲೆಗಳಲ್ಲಿ ದಾವಾ ಆಸ್ತಿಯಾದ ದಾರಿ ಇರುವ ಬಗ್ಗೆ ನೀವೇನಾದರೂ ದಾಖಲೆಯನ್ನು ನೋಡಿದ್ದಿರಾ ಎಂದರೆ ನಾನು ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಪೂರ್ವದ ಕಡೆಗೆ 22 ಪೂಟ್ ಅತಿಕ್ರಮಣ ಮಾಡಿರುತ್ತಾರೆ ಪ್ರತಿವಾದಿಯು ಪೂರ್ವ ಪಶ್ಚಿಮ ಅತಿಕ್ರಮಣ ಮಾಡಿರುತ್ತಾರೆ ಪ್ರತಿವಾದಿಯು ಉತ್ತರ ದಕ್ಷಿಣ 30 ಪೂಟ್ ಅತಿಕ್ರಮಣ ಮಾಡಿರುತ್ತಾರೆ ನನ್ನ ವಾದ ಪತ್ರದಲ್ಲಿ ಪ್ರತಿವಾದಿಯು ಪೂರ್ವ ಪಶ್ಚಿಮ 22 ಪೂಟ್ ಮತ್ತು ಉತ್ತರ ದಕ್ಷಿಣ 30 ಪೂಟ್ ಅತಿಕ್ರಮಣ ಮಾಡಿರುತ್ತಾರೆ ಎಂದು ಬರೆಸಿರುತ್ತೇನೆ. ನನ್ನ ವಾದ ಪತ್ರದ ಜೊತೆಗೆ ನಾನು ಹಾತನಕಾಶೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ.

ವಾದ ಪತ್ರವನ್ನು ತಿದ್ದುಪಡಿ ಮಾಡಲು ಮಧ್ಯಂತರ ಅರ್ಜಿಯನ್ನು ಹಾಕಿದ್ದೆ ಎಂದರೆ ಸರಿ. ದಿಕ್ಕುಗಳನ್ನು ಬದಲಾವಣೆ ಮಾಡಲು ಮಾತ್ರ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ನನ್ನ ಅರ್ಜಿಯ ಪೂರ್ವ ಇರುವ ಸ್ಥಳದಲ್ಲಿ ಉತ್ತರ ಎಂದು ತಿದ್ದುಪಡಿ ಮಾಡಲು ಹೇಳಿದ್ದೆ ಎಂದರೆ ಸರಿ. ಪಶ್ಚಿಮ ಅಂತ ಬರೆದಲ್ಲಿ ದಕ್ಷಿಣ ಎಂದು ತಿದ್ದುಪಡಿ ಮಾಡಲು ಕೇಳಿದ್ದೆ ಎಂದರೆ ಸರಿ. ನನ್ನ ಮಧ್ಯಂತರ ಅರ್ಜಿಯ ಪ್ರಕಾರ ನಾನು ನನ್ನ ವಾದ ಪತ್ರವನ್ನು ತಿದ್ದುಪಡಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾತನಕಾಶೆಯಲ್ಲಿ ಪೂರ್ವ ಪಶ್ಚಿಮ 20 ಪೂಟ್ ಮತ್ತು ಉತ್ತರ ದಕ್ಷಿಣ 40 ಪೂಟ್ ಸಾರ್ವಜನಿಕ ಆಸ್ತಿಯನ್ನು ಅತಿಕ್ರಮಣ ಮಾಡಿರುವ ಬಗ್ಗೆ ಬರೆಸಿರುತ್ತೇನೆ ಎಂದರೆ ಸರಿ. ನನ್ನ ಹಾತನಕಾಶೆಯಲ್ಲಿ ಅತಿಕ್ರಮಣ ಮಾಡಿದ್ದನ್ನು ಬರೆಸಿದ್ದು ಸರಿ ಇರುತ್ತದೆ ಆಗಲೇ ಹೇಳಿದ ಅತಿಕ್ರಮಣ ಮಾಡಿರುತ್ತಾನೆ ಎಂದು ಹೇಳಿದ್ದು ಸರಿ ಇರುತ್ತದೆ ದಾವಾ ಆಸ್ತಿಯಾದ ದಾರಿಯನ್ನು ಅತಿಕ್ರಮಣ ಮಾಡಿದ ಬಗ್ಗೆ ನಾನು ಅಳತೆ ಮಾಡಿರುತ್ತೇನೆ ದಾವಾ ಆಸ್ತಿಯಾದ ದಾರಿಯನ್ನು ಅಳತೆ ಮಾಡುವಾಗ ಸಾವಿರಾರು ಜನ ಇದ್ದರು. ಆ ಕಾರಣ ಅವರ ಹೆಸರುಗಳನ್ನು ನನಗೆ ಹೇಳಲು ಬರುವುದಿಲ್ಲ. 2012 ನೇ 10 ನೇ ತಿಂಗಳಲ್ಲಿ ದಾವಾ ಆಸ್ತಿಯಾದ ದಾರಿಯ ಅಳತೆಯನ್ನು ನಾನು ಮಾಡಿರುತ್ತೇನೆ. ದಾವಾದ ಆಸ್ತಿಯನ್ನು ನಾನು ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ದಾವಾ ಆಸ್ತಿಯಾದ ದಾರಿಯನ್ನು ಅತಿಕ್ರಮಣ ಮಾಡಿರುವ ಬಗ್ಗೆ ಉಪ ವಿಭಾಗಾಧಿಕಾರಿಗಳ, ತಹಶೀಲ್ದಾರ ಹಾಗೂ ಪುರಸಭೆ ಅಧಿಕಾರಿಗಳಲ್ಲಿ ನಾನು ಮನವಿಯನ್ನು ಕೊಟ್ಟಿದ್ದೆ ಎಂದರೆ ಸರಿ. ನನ್ನ ಮನವಿಯ ಮೇರೆಗೆ ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರ ಹಾಗೂ ಪುರಸಭೆ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಲು ಬಂದಿದ್ದರು. 2012 ನೇ 9 ನೇ ತಿಂಗಳಲ್ಲಿ ನಾನು ಅರ್ಜಿಯನ್ನು ಕೊಟ್ಟಿದ್ದೆ. 2012 ನೇ 9 ನೇ ತಿಂಗಳಲ್ಲಿ ಉಪವಿಭಾಗಾಧಿಕಾರಿಗಳು, ತಹಶೀಲ್ದಾರ ಹಾಗೂ ಪುರಸಭೆ ಅಧಿಕಾರಿಗಳು ಪ್ರತಿವಾದಿಗೆ ಮನೆಯನ್ನು ಕಟ್ಟಬೇಡ ಎಂದು ಹೇಳಿದ್ದರು. ಉಪವಿಭಾಗಾಧಿಕಾರಿಗಳು, ತಹಶೀಲ್ದಾರ ಹಾಗೂ ಪುರಸಭೆ ಅಧಿಕಾರಿಗಳು ಪ್ರತಿವಾದಿಯ ವಿರುದ್ಧ ಕ್ರಮವನ್ನು ತೆಗೆದುಕೊಂಡಿರುತ್ತಾರೆ ಕ್ರಮವನ್ನುತೆಗೆದುಕೊಂಡ ಬಗ್ಗೆ ಈ ದಾವೆಯಲ್ಲಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ

ಉಪವಿಭಾಗಾಧಿಕಾರಿಗಳು, ತಹಶೀಲ್ದಾರ ಹಾಗೂ ಪುರಸಭೆ ಅಧಿಕಾರಿಗಳನ್ನು ಈ ದಾವೆಯಲ್ಲಿ ನಾನು ಪಕ್ಷಗಾರರನ್ನಾಗಿ ಸೆರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. ಉಪವಿಭಾಗಾಧಿಕಾರಿಗಳು, ತಹಶೀಲ್ದಾರ ಹಾಗೂ ಪುರಸಭೆ ಅಧಿಕಾರಿಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಲು ನನಗೇನು ತೊಂದರೆ ಇರಲಿಲ್ಲ. ಉಪವಿಭಾಗಾಧಿಕಾರಿಗಳು, ತಹಶೀಲ್ದಾರ ಹಾಗೂ ಪುರಸಭೆ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯ ಗಂಡನಿಗೆ ಬಾಬನಿ ಹಾಗೂ ಜೋಗೆರ ಎಂದು ಎರಡು ಅಡ್ಡ ಹೆಸರುಗಳಿಂದ ಕರೆಯುತ್ತಾರೆ ಎಂದರೆ ಸರಿ. 1998 ಇಸ್ವಿಯಲ್ಲಿ ಪ್ರತಿವಾದಿಯ ಗಂಡನು ಆಸ್ತಿ ನಂ. 338/30 ನೇದ್ದನ್ನು ನಾಗೇಂದ್ರಪ್ಪ ರಾಶಿನಕರ ಇವರಿಂದ ಕ್ರಯ ಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ಸರಿ ಪ್ರತಿವಾದಿಯ ಗಂಡನು ಹಿಡಿದ ಆಸ್ತಿಯ ಪೂರ್ವಕ್ಕೆ ನನ್ನ ಆಸ್ತಿ ಇರುವುದಿಲ್ಲ 1 ನೇ ವಾದಿಯಾದ ಬಶೀರಹ್ಮದ ಅಣ್ಣಿಗೇರ ಇವರ ಆಸ್ತಿ ಇರುತ್ತದೆ. ಪಶ್ಚಿಮಕ್ಕೆ ನಾಗೇಂದ್ರಪ್ಪನ ಇನ್ನುಳಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನಾಗೇಂದ್ರಪ್ಪ ರಾಶಿನಕರ ಇವರಿಗೆ 5 ಗುಂಟೆ ಜಾಗ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 3 ಗುಂಟೆ ಜಾಗ ಇತ್ತು ಎಂದು ನುಡಿಯುತ್ತಾರೆ. ನಾಗೇಂದ್ರಪ್ಪ ರಾಶಿನಕರ ಇವರ 5 ಗುಂಟೆ ಜಾಗದಲ್ಲಿ ಪಶ್ಚಿಮದ ದಿಕ್ಕಿನಲ್ಲಿ ಇರುವ 3 ಗುಂಟೆ ಜಾಗವನ್ನು ಖರೀದಿಗೆ ಹಿಡಿದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಉಳಿದ ಜಾಗದಲ್ಲಿ ಮಸೀದಿ ಮತ್ತು ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಖರೀದಿ ಪತ್ರವನ್ನು ಹಾಜರುಪಡಿಸಿರುತ್ತೇನೆ 1998 ನೇ ಇಸ್ವಿಯ ಕ್ರಯ ಪತ್ರದಲ್ಲಿ 3 ಗುಂಟೆಯ ಆಸ್ತಿಯ ಪೂರ್ವಕ್ಕೆ ಇದೇ ನಂಬರ ಪೈಕಿ ನನ್ನದೇ ಉಳಿದ ಆಸ್ತಿ ಇರುತ್ತದೆ ಎಂದು ಬರೆದಿರುವುದು ಸುಳ್ಳು ಇರುತ್ತದೆ. ಖರೀದಿ ಪತ್ರವನ್ನು ರದ್ದು ಪಡಿಸಲು ನಾನು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಪೂರ್ವ ದಿಕ್ಕಿನ ಇನ್ನುಳಿದ 2 ಗುಂಟೆಯನ್ನು ಪ್ರತಿವಾದಿಯ ಗಂಡನಿಗೆ ನಾಗೇಂದ್ರಪ್ಪ ರಾಶಿನಕರ ಇವರು ಹಕ್ಕು ಬಿಟ್ಟ ಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಗಂಡನು 2 ಗುಂಟೆ ಜಾಗೆಯನ್ನು ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾನೆ ಎಂದರೆ ಸಾಕ್ಷಿಯು 3 ಗುಂಟೆ ಜಾಗ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ.

ಪುರಸಭೆ ಆಸ್ತಿ ನಂ. 338/30/1 ಪ್ರತಿವಾದಿಯರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅವರು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಲಾಯಿತು. ಸಾಕ್ಷಿಯು ಸದರಿ ಛಾಯಾ ಚಿತ್ರವನ್ನು ನೋಡಿ ಗುರ್ತಿಸಿದ್ದು ಅದನ್ನು ನಿ.ಡಿ 1 ಎಂದು ಗುರ್ತಿಲಾಯಿತು. ನಿ.ಡಿ 1 ರಲ್ಲಿ ಪ್ರತಿವಾದಿಯು ಕಟ್ಟಿಸುತ್ತಿದ್ದ ಮನೆಯ ಪೂರ್ವದ ಕಡೆಗೆ ರಸ್ತೆ ಇರತ್ತದೆಯಾ ಎಂದು ನೋಡಿ ಹೇಳಿ ಕೇಳಿದ ಪ್ರಶ್ನೆಗೆ ಸಾಕ್ಷಿಯು ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಛಾಯಾ ಚಿತ್ರದಲ್ಲಿ ರಸ್ತೆ ಇರುವ ಬಗ್ಗೆ ತಿರುವುಗಳು ಕಾಣುವುದಿಲ್ಲ ಎಂದರೆ ಸಾಕ್ಷಿಯು ಅತಿಕ್ರಮಣ ಮಾಡಿರುವ ಕಾರಣ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಛಾಯಾ ಚಿತ್ರದಲ್ಲಿ ಎಂದಿಗೂ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾರ್ವಜನಿಕ ರಸ್ತೆಯು ಎಷ್ಟು ವರ್ಷಗಳ ಹಳೆಯ ರಸ್ತೆಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಕಳೆದ 30 ವರ್ಷಗಳಿಂದ ಸಾರ್ವಜನಿಕ ರಸ್ತೆಯನ್ನು ನೋಡುತ್ತಿದ್ದೇನೆ. ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಕಾಲುವೆ ಮಾಡಿದ್ದರು ಮಳೆ ಬಂದು ಅದು ಮುಚ್ಚಿ ಹೋಗಿರುತ್ತದೆ. ಸಾರ್ವಜನಿಕ ರಸ್ತೆ ಇರದ ಕಾರಣ ಪುರಸಭೆಯವರು ರಸ್ತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ಪುರಸಭೆಯಿಂದ ಪರವಾನಿಗೆಯನ್ನು ಪಡೆದುಕೊಂಡು ತನ್ನ ಆಸ್ತಿಯಲ್ಲಿ ಮಾತ್ರ ಮನೆಯನ್ನು ಕಟ್ಟುತ್ತಿದ್ದಾಳೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯಲ್ಲಿ ಚಕ್ಕಡಿ ಮತ್ತು ವಾಹನಗಳು ಅಡ್ಡಾಡಿದ ಬಗ್ಗೆ ಕುರುಹುಗಳು ಇರವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಉಳಿದ ವಾದಿಯರು ಕೂಡಿ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾರ್ಡ ನಂ. 8 ರಲ್ಲಿ ದಾವಾ ಆಸ್ತಿಯಾದ ದಾರಿಯು ಬರುತ್ತದೆ. ದಾವಾ ಆಸ್ತಿಯಾದ ದಾರಿಯು ವಾರ್ಡ ನಂ. 8 ರಲ್ಲಿ ಬರುತ್ತದೆ ಎಂದು ತೋರಿಸಲು ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಸಾರ್ವಜನಿಕ ರಸ್ತೆಯು ನಾಗೇಂದ್ರಪ್ಪ ರಾಶಿನಕರ ಇವರ ಆಸ್ತಿಯಲ್ಲಿ ಬರುತ್ತದೆ. ನಾಗೇಂದ್ರಪ್ಪ ರಾಶಿನಕರ ಇವರ ಆಸ್ತಿಯಲ್ಲಿರುವ ಸಾರ್ವಜನಿಕ ರಸ್ತೆಯನ್ನು ರಸ್ತೆ ಮಾಡಲು ಸರ್ಕಾರದವರು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಎಷ್ಟನೇ ಇಸ್ವಿಯಲ್ಲಿ ಸರ್ಕಾರದವರು ರಸ್ತೆಯನ್ನು ಮಾಡಲು ತೆಗೆದುಕೊಂಡರು ಎಂದು ನನಗೆ ಹೇಳಲು ಬರುವುದಿಲ್ಲ. ಸರ್ಕಾರದವರು ರಸ್ತೆಯನ್ನು ಮಾಡಲು ತೆಗೆದುಕೊಂಡಿದ್ದರು ಎನ್ನುವ ಬಗ್ಗೆ ದಾಖಲೆಯನ್ನು ನೋಡಿರುವುದಿಲ್ಲ. ನಾಗೇಂದ್ರಪ್ಪ ರಾಶಿನಕರ ಈತನು ಎಂದಿಗೂ ರಸ್ತೆ ಮಾಡಲು ಸರ್ಕಾರಕ್ಕೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾಗೇಂದ್ರಪ್ಪ ರಾಶಿನಕರ ಇವರು ರಸ್ತೆ ಮಾಡಲು ಕೊಟ್ಟಿದ್ದರು ಎನ್ನುವ ಬಗ್ಗೆ ವಾದ ಪತ್ರದಲ್ಲಿ ಬರೆಸಿರುತ್ತಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ರಸ್ತೆ ಇರುತ್ತದೆ ಎಂದು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ನಾಗೇಂದ್ರಪ್ಪ ರಾಶಿನಕರ ಇವರು ರಸ್ತೆ ಮಾಡಲು ಕೊಟ್ಟಿರುವ ಬಗ್ಗೆ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಸಾರ್ವಜನಿಕ ರಸ್ತೆಯನ್ನು ಅತಿಕ್ರಮಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ ಪ್ರತಿವಾದಿಯು ತನ್ನ ಆಸ್ತಿಯಲ್ಲಿ ಮಾತ್ರ ಮನೆಯನ್ನು ಕಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಪ್ರತಿವಾದಿಯು ಕಟ್ಟುತ್ತಿರುವ ಮನೆಯ ಪೂರ್ವಕ್ಕೆ ಎಂದಿಗೂ ಸಾರ್ವಜನಿಕ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.